# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್ ಅವರು ನಾಗಪುರದ 'ಉತ್ತಿಷ್ಠ ಭಾರತ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ 'ಭಾರತ 2047 : ನಮ್ಮ ದೃಷ್ಟಿ' ಎಂಬ ವಿಚಾರದ ಕುರಿತು ಮಾತನಾಡಿದರು.


ಸಂಪುಟ : 44 | ಸಂಚಿಕೆ : 10 | ಶುಭಕೃತ್ – ಭಾದ್ರಪದ | ಕಲಿಯುಗಾಬ್ದ 5124 | 1-09-2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್రತಿ : ರೂ. 3.00 | ಪುಟಗಳು : 4


## ಅಮೃತ ದೇವಿ ಸ್ಮರಣೆಯಲ್ಲಿ ಆಗಸ್ಟ್ 28ರಂದು ಪ್ರಕೃತಿ ವಂದನ

ಶಾರ್ವರಿ ಸಂವತ್ಸರ ಇಡೀ ವಿಶ್ವವನ್ನೇ ಭಯ ವಿಹ್ವಲ ಗೊಳಿಸಿತು. ಮನುಷ್ಯರಷ್ಟೇ ಅಲ್ಲ ಪ್ರಾಣಿಗಳ ಮುಖದ ಮೇಲೂ ಮುಖ ಗೌಸೊಂದ ಬಿಗಿದು ಸದ್ದು ಸದ್ದು ಎಂದು ಜಬರಿಸಿತು. ಮರಣ ಮೃದಂಗ ವಾಗಿ ಆಬ್ಬರಿಸಿದ ಕೋವಿಡ್ ಮಹಾಮಾರಿ ಶಾರ್ವರಿಸಂವತ್ಸರದ "ವರಿ" ಪ್ಲವ ಸಂವತ್ಸರದಲ್ಲೂ ಕೊನೆಗೊಳ್ಳಲಿಲ್ಲ! ಇದು ಶುಭಕೃತ್ ಸಂವತ್ಸರ. ಪ್ಲವದ ವಿಪ್ಲವವನ್ನೇ ದಾಟಿ ಭವಿಷ್ಯತ್ತಿನ ಕುರಿತಂತೆ ವಿಶ್ವವೇ ಚಿಂತೆ ಮತ್ತು ಚಿಂತನೆಯಲ್ಲಿ ತೊಡಗಿದೆ. ದೇಶ ದೇಶಗಳ ಗಡಿಗಳ ಹಂಗಿಲ್ಲದೆ ಹೆಮ್ಮಾರಿಯಾಗಿ ಆಹುತಿ ಪಡೆಯುತ್ತಲೇ ಕೋವಿಡ್ ಮಹಾಮಾರಿ ಈಗ ಮೂರನೆಯ ಪಾದದ ವಿಸ್ತಾರದ ಹವಣಿಕೆಯಲ್ಲಿದೆ! ಮತ್ತೆ ಮಾರು ವೇಷದಲ್ಲಿ ಕಾಡಲಿದೆ ಎಂದು ಮಾಧ್ಯಮಗಳು third wave ಕುರಿತಾಗಿ ಸಾರಿ ಸಾರಿ ಎಚ್ಚರಿಸುತ್ತಲೇ ಇವೆ. ಜನತೆ ಮಾತ್ರ ನೋಡಿದ್ದೇ ಮುಖ! ಕೂತಲ್ಲೇ ಕುಳಿತು ಮುಖ ಮುಖ ನೋಡಿ ಸಾಕಾಗಿ ಹೊಸ ಬದುಕನ್ನು ಕಟ್ಟಿಕೊಳ್ಳುವ, ಸ್ವಚ್ಛಂದದ ಬದುಕಿನ ಸ್ವಾತಂತ್ರ್ಯಕ್ಕಾಗಿ ಹಪಹಪಿಸುತ್ತಿದೆ. ಇನ್ನು ತಡವೇಕೆ ಹೊರಟೇ ಬಿಟ್ಟಿದ್ದಾರೆ ಬೀದಿಗೆ ಬೀಡುಬೀಸಾಗಿ ! ಎಲ್ಲೆಂದರಲ್ಲಿ ಕನಿಷ್ಟ ಎಚ್ಚರಿಕೆಯ "ಮಾಸ್ಕನ್ನು" ಮರೆತುಬಿಟ್ಟಿದ್ದಾರೆ. ಸಾಕಪ್ಪ ಕಿರಿಕಿರಿ ಎನಿಸಿದೆ. "ದೋ ಗಜ ದೂರಿ ಮಾಸ್ಕ ಜರೂರಿ" ನಾವು ಕಿವಿಗೇ ಹಾಕಿಕೊಂಡಿಲ್ಲ! ಉಪಜೀವನದ ಧಾವಂತದಲ್ಲಿ ಜನತೆ ಜೀವವನ್ನೇ ಪಣಕ್ಕಿಟ್ಟು ಬಿಟ್ಟಿದೆ. ಜನತೆ ಹಾಗೂ ರಾಜಕಾರಣಿಗಳು ಈ ವಿಚಾರದಲ್ಲಿ ಸಮಾನವಾಗಿ ವ್ಯವಹರಿಸುತ್ತಿದ್ದಾರೆ.

ಇಷ್ಟಕ್ಕೂ ಮಹಾಮಾರಿಯ ವೇಗೋತ್ಕರ್ಷ ತಡೆಗೆ ಇರುವ ದಾರಿ ಎಂದರೆ social distance ಮತ್ತು physical distances ಎಂಬುದನ್ನು ಮರೆತೇಬಿಟ್ಟಿದ್ದೇವೆ. ಹಬ್ಬ-ಹರಿದಿನಗಳಲ್ಲಿ ಸಿಗಬಹುದಾದ ರಿಬೇಟುಗಳಿಗೆ ಜನ ಮುಗಿಬೀಳುತ್ತಿದ್ದಾರೆ.

ತಮ್ಮ ನೆಚ್ಚಿನ ನಾಯಕ ಮಣಿಗಳ ಸ್ವಾಗತದ ಪರಿಯಲ್ಲೂ ಅದೇ ಎಡವಟ್ಟು ಮರುಕಳಿಸುತ್ತಿದೆ. ನಮ್ಮ ಸುತ್ತಮುತ್ತಲೇ ನಮ್ಮ ಪರಿಸರದಲ್ಲೇ...

ಪರಿಸರವೆಂದಾಗ ಜೂನ್ 5ರಂದು ಸಾರ್ವಜನಿಕವಾಗಿ ಗಿಡ ನೆಟ್ಟು ಪತ್ರಿಕೆಗೆ ಫೋಸ್ ಕೊಡುವ ವಿಶ್ವ ಪರಿಸರ ದಿನ ಆಚರಣೆಗೆ ಸಿಮಿತವಾಗಿಬಿಟ್ಟಿದೆ. ಇದರ ಹೊರತಾಗಿ ನಾವು ಪ್ರಕೃತಿಯ ಕುರಿತಾಗಿ ದಿವ್ಯ ನಿರ್ಲಕ್ಷವನ್ನೇ ಹೊಂದಿದ್ದೇವೆ.

### ವೃಕ್ಷ ಸಂರಕ್ಷಣೆಗೆ ಬಲಿದಾನ ಗೈದ ಅಮೃತ ದೇವಿ ಬಿಸ್ನೋಯ್

ಇಸವಿ 1787 ಆಗಸ್ಟ್ 28, ಅಂದರೆ 350 ವರ್ಷಗಳ ಹಿಂದೆ ನಡೆದ ಒಂದು ಜೀವ ಹಿಂಡುವ ಘಟನೆ. ಅದು ನಡೆದಿದ್ದು ರಾಜಸ್ಥಾನದ ಜೋಧಪುರದಲ್ಲಿ. ಜೋಧಪುರದ ರಾಜ ಅಜಿತಸಿಂಹ ತನ್ನ ಅರಮನೆಯ ಸೌಂದರ್ಯ ವರ್ಧನೆಗೆ ಮರುಭೂಮಿಯ ಅಂಚಿನಲ್ಲಿ ಸೊಂಪಾಗಿ ಬೆಳೆದ ಖೇಜಾಡಿ ವೃಕ್ಷಗಳನ್ನು ಕತ್ತರಿಸಿ ತರುವಂತೆ ಅಜ್ಞಾಪಿಸಿದ್ದ.

ಸುದ್ದಿ ತಿಳಿದು ವೃಕ್ಷ ರಕ್ಷಣೆಗೆ ತನ್ನ ಮೂವರು ಹೆಣ್ಣುಮಕ್ಕಳ ಜೊತೆಗೆ ಧಾವಿಸಿ ಬಂದ ಅಮೃತದೇವಿ ಬಿಸ್ನೊಯ್ ಯಾವುದೇ ಕಾರಣಕ್ಕೂ ವೃಕ್ಷ ಸಂಹಾರಕ್ಕೆ ಅವಕಾಶ ಕೊಡುವುದಿಲ್ಲ ಎಂದು ದೃಢವಾಗಿ ಹೇಳುತ್ತಾಳೆ. ರಾಜಾಜ್ಞೆಯನ್ನು ವಿರೋಧಿಸುವುದು ಎಂದರೆ ಮರಣದಂಡನೆಯ ಗತಿ ! ಅದನ್ನು ಲೆಕ್ಕಿಸದೆ ತಾಯಿ ಮಕ್ಕಳು ಮರವನ್ನು ತಬ್ಬಿ ಹಿಡಿದು ಪ್ರತಿಭಟಿಸುತ್ತಾರೆ. ಪ್ರತಿಭಟನೆಯನ್ನು ಲೆಕ್ಕಿಸದೆ ಅಮೃತ ದೇವಿ ಮತ್ತು ಆಕೆಯ 3 ಹೆಣ್ಣು ಮಕ್ಕಳನ್ನು ಎಳೆದು ಕತ್ತರಿಸಿ ಚೆಲ್ಲುತ್ತಾರೆ ಸೈನಿಕರು. ಸುದ್ದಿ ತಿಳಿದ ಬೀಸ್ನೋಯ್ ಸಮಾಜದ ಜನ ಧಾವಿಸಿ ಬಂದು ಪ್ರತಿಭಟಿಸಿ ಸೈನಿಕರ ವಿರುದ್ಧ ನಿಲ್ಲುತ್ತಾರೆ. ಆ ಹೋರಾಟದಲ್ಲಿ 363 ಬಿಸ್ನೊಯ್ ಸಮಾಜ ಬಂಧುಗಳು ಸ್ತೀ ಪುರುಷರಾಗಿ ರಾಜ ಅಜಿತ ಸಿಂಹನ ಸೈನಿಕರಿಂದ ಹತ್ಯೆಗೊಳಗಾಗುತ್ತಾರೆ.

ಈ ಭೀಕರ ನರಸಂಹಾರದ ಸುದ್ದಿ ರಾಜನ ಕಿವಿಗೆ ಬೀಳುವಷ್ಟರಲ್ಲಿ ತಡವಾಗಿ ಹೋಗಿತ್ತು. ರಾಜ ಅಜಿತಸಿಂಗ ದಂಗಾಗುತ್ತಾನೆ. ಅಷ್ಟರೊಳಗೆ ಅಲ್ಲಿ ರಕ್ತದ ಹೊಳೆ ಹರಿದಿರುತ್ತದೆ, ರಕ್ತಪಾತವಾಗಿರುತ್ತದೆ. ಮುಂದೆ ಅಲ್ಲಿ ವೃಕ್ಷ ಹನನವಾಗದಂತೆ ರಾಜನ ಆಜ್ಞೆಯಾಗುತ್ತದೆ. ಅಲ್ಲಿ ಅಮೃತದೇವಿ ಬಿಸ್ನೊಯ್ ಹೆಸರಿನಲ್ಲಿ ವೀರಗಲ್ಲನ್ನು ಸ್ಥಾಪಿಸಲಾಗುತ್ತದೆ.



### ಬಿಸ್ನೊಯ್ ಸಮಾಜಕ್ಕೆ ಗುರು ಜಂಬೇಶ್ವರ ಮಹಾರಾಜರ ವಚನ

ಬಿಸ್ನೋಯ್ ಸಮಾಜ ಗುರು ಜಂಬೇಶ್ವರ ಮಹಾರಾಜರ ಕುರಿತು ಅತೀವ ಶ್ರದ್ಧೆ ಹೊಂದಿರುವ ಸಮಾಜ. ಗೋವು, ಹರಿಣ, ವೃಕ್ಷ ಇತ್ಯಾದಿ 20 ಮಹತ್ವದ ಸಂಗತಿಗಳ ಕುರಿತು ಸಮಾಜದಿಂದ ಅವರು ರಕ್ಷಣೆಯ ವಚನ ತೆಗೆದುಕೊಂಡಿದ್ದರು. ಗುರು ವಚನದ ಈಡೇರಿಕೆಗೆ ಪ್ರಾಣಾರ್ಪಣೆಗೂ ಸಿದ್ಧ ಈ ಸಮಾಜ. ಈ ಹಿಂದೆ ಸಿನಿಮಾ ನಟ ಸಲ್ಮಾನ್ ಖಾನ್ ಹರಿಣಗಳ ಬೇಟೆ ಆಡಿದ್ದಕ್ಕೇ ಮೊಕದ್ದಮೆ ದಾಖಲಿಸಿ ಹೋರಾಟ ನಡೆಸುತ್ತಿರುವ ಹಿನ್ನೆಲೆಯೂ ಇದೇ.

### ಆಗಸ್ಟ್ 28ರಂದು ಪ್ರಕೃತಿ ವಂದನ

ಜಗತ್ತಿನ ಇತಿಹಾಸದಲ್ಲಿ ಅತ್ಯಂತ ವೇದನಾ ಪೂರ್ಣ ಮತ್ತು ಪ್ರೇರಣಾದಾಯಿಯು ಆದ ಅಮೃತದೇವಿ ಬಿಸ್ನೋಯ್ ಮಹೋನ್ನತ ಬಲಿದಾನ ಮತ್ತು ಅನನ್ಯ ಪರಿಸರ ಪ್ರೇಮದ ಸಂದೇಶವನ್ನು ಮನೆ ಮನಗಳಲ್ಲಿ ಮುಟ್ಟಿಸುವಲ್ಲಿ 'ಪರ್ಯಾವರಣ ಸಂರಕ್ಷಣಾ ಗತಿ ವಿಧಿ' ದೇಶ ವ್ಯಾಪಿಯಾಗಿ ಅಮೃತಾ ದೇವಿ ಸ್ಮರಣೆಯಲ್ಲಿ ಆಗಸ್ಟ್ 28ರಂದು ಪ್ರಕೃತಿ ವಂದನ ಕಾರ್ಯಕ್ರಮವನ್ನು ದೇಶವ್ಯಾಪಿಯಾಗಿ ನಡೆಸುತ್ತಿದೆ. ಅಂದು ನಗರ, ಗ್ರಾಮಗಳಲ್ಲಿ ವೃಕ್ಷಾರೋಪಣ ಗೈದು, ಯಾವುದೇ ಒಂದು ವೃಕ್ಷವನ್ನು ಪೂಜಿಸಿ ಪ್ರಕೃತಿ ಸಂರಕ್ಷಣೆಯ ಸಂಕಲ್ಪ ಕೈಗೊಳ್ಳಲಾಗುತ್ತದೆ.

ಈ ಕಾರ್ಯಕ್ರಮವನ್ನು ಹೆಚ್ಚು ಹೆಚ್ಚು ಸ್ಥಳಗಳಲ್ಲಿ, ಶಾಲಾ/ಕಾಲೇಜುಗಳಲ್ಲಿ ಯುವಕ ಸಂಘ ರೈತರ ಕ್ಷೇತ್ರಗಳು ಇತ್ಯಾದಿಯಾಗಿ ಜನ ಸಮುದಾಯ ಜೊತೆ ಸೇರಿ, ಅಮೃತ ದೇವಿ ಬೀಸ್ನೊಯ್ ಬಲಿದಾನದ ಸ್ಮರಣೆ ಮತ್ತು ಪ್ರಕೃತಿ ಸಂರಕ್ಷಣೆಯ ಜಾಗೃತಿ ಆಚರಿಸುವಂತೆ 'ಪರ್ಯಾವರಣ ಸಂರಕ್ಷಣಾ ಗತಿ ವಿಧಿ' ಜನತೆಯನ್ನು ವಿನಂತಿಸಿಕೊಂಡಿದೆ.

### ವೃಕ್ಷ ರಕ್ಷಣೆಯ ಅವಶ್ಯಕತೆ

ವಿಶ್ವದ ಪ್ರತಿಶತ ಐವತ್ತರಷ್ಟು ಅರಣ್ಯ ಈಗಾಗಲೇ ನಷ್ಟವಾಗಿದೆ. ಜಗತ್ತಿನ ಶೇಕಡಾ ಎಪ್ಪತ್ತರಷ್ಟು ಅರಣ್ಯ ಸಂಪತ್ತು ಕ್ರಮವಾಗಿ ಹೀಗಿದೆ:

- 'ರಷ್ಯಾ' 81,49,300 ಚದರ ಕಿಲೋಮೀಟರ್‌ನಷ್ಟು ಅರಣ್ಯಪ್ರದೇಶವನ್ನು ಹೊಂದಿದೆ. ಆ ಪೈಕಿ ಲಕ್ಷಾಂತರ ಚ.ಕಿ. ಮೀಟರ್ ಕುರುಚಲು ಸಸ್ಯಗಳಿಂದ ಆವೃತ ಹಿಮ ಕಾಡು ಸೇರಿದೆ.
- 'ಕೆನಡಾ' 49,16,438. ಚ.ಕಿ. ಮೀಟರ್ ವಿಶ್ವದಲ್ಲಿರುವ ಅರಣ್ಯ ಪ್ರದೇಶದ ಶೇ.30ರಷ್ಟು ಅರಣ್ಯ ಪ್ರದೇಶ ಕೆನಡಾದಲ್ಲಿದೆ.
- 'ಬ್ರೆಜಿಲ್' 47,76,980 ಚ.ಕಿ.ಮೀಟರ್ ವ್ಯಾಪ್ತಿಯಲ್ಲಿ ಹಬ್ಬಿದೆ. ಜಗತ್ಪ್ರಸಿದ್ಧ ಅಮೆಜಾನ್ ಕಾಡು ಅದರ ಹೆಮ್ಮೆ.
- 'ಅಮೇರಿಕ' ಜಗತ್ತಿನ ದೊಡ್ಡಣ್ಣ ಎಂದು ಕರೆಸಿಕೊಳ್ಳುವ ಅಮೆರಿಕ 31,00,950 ಚ.ಕಿ.ಮೀಟರ್‌ನಷ್ಟು ಅರಣ್ಯ ಹೊಂದಿದೆ.
- 'ಆಸ್ಟ್ರೇಲಿಯಾ' 14,70,832 ಚ.ಕಿ.ಮೀ. ಆಸ್ಟ್ರೇಲಿಯ ತನ್ನ ದೇಶದ ಒಟ್ಟು ವಿಸ್ತೀರ್ಣದ ಶೇ.19ರಷ್ಟು ಭಾಗ ಅರಣ್ಯ ವಿಸ್ತೀರ್ಣವನ್ನು ಹೊಂದಿದೆ.

ಗರಿಷ್ಠ ಅರಣ್ಯ ಪ್ರದೇಶಗಳನ್ನು ಹೊಂದಿರುವ ದೇಶಗಳಲ್ಲಿ ಭಾರತದ್ದು ಹತ್ತನೇ ಕ್ರಮಾಂಕ.

ಸಮೃದ್ಧ ಕಾಡುಗಳಿಂದಲೇ ಸಮೃದ್ಧ ಮಳೆ. ಮಳೆಯಿಂದಲೇ ಸಮೃದ್ಧ ಜನಜೀವನ ಎಂಬ ಸತ್ಯವನ್ನು ನಾವು ನಿರ್ಲಕ್ಷಿಸಿದ್ದೇ ವ್ಯಾಪಕ ಅರಣ್ಯ ನಾಶಕ್ಕೆ ಕಾರಣ. ಸರಕಾರಿ ಪ್ರಾಯೋಜಿತ ಅಕೇಶಿಯಾ ದಂತ ನೆಡುತೋಪುಗಳು ಪ್ರಕೃತಿಗೆ ಇನ್ನಷ್ಟು ತಾಪವನ್ನು ಹೆಚ್ಚಿಸುತ್ತಿದೆ. ಇಷ್ಟು ಸಾಲದೆಂಬಂತೆ ಸಮುದ್ರಗಳು ಕಲುಷಿತಗೊಂಡಿವೆ. ನದಿಗಳು/ಕೈಗಾರಿಕೆಗಳ ತ್ಯಾಜ್ಯಗಳ ಮಡುವಾಗಿ ಬಿಟ್ಟಿದೆ. ಕೆರೆಗಳು ಆಕ್ರಮಿಸಲ್ಪಟ್ಟು ಬಹುಅಂತಸ್ತಿನ ಕಟ್ಟಡಗಳು ತಲೆಯೆತ್ತಿ ನಿಂತಿವೆ.

ಪ್ರತಿವರ್ಷ 100 ಕೋಟಿ ವೃಕ್ಷಗಳ ಹನನವಾಗುತ್ತಿದೆ. ಪರಿಣಾಮ ಜಾಗತಿಕ ತಾಪಮಾನ ಏರುತ್ತಲೇ ಇದೆ. ಮನುಷ್ಯನ ಸ್ವಯಂಕೃತಾಪರಾಧಕ್ಕೆ ಅರಣ್ಯವನ್ನು ಆಶ್ರಯಿಸಿರುವ ಜೀವ ಸಂಕುಲಗಳು/ಬಾನಾಡಿಗಳು ದಿಕ್ಕೆಟ್ಟು ನಾಡಿಗೆ ದಾಂಗುಡಿ ಇಡುತ್ತಿವೆ.

ಪಶ್ಚಿಮದ ಜನ ಪ್ರಕೃತಿಯನ್ನು ಭೋಗದ ವಸ್ತುವೆಂದೇ ಕಂಡವರು. ನಮ್ಮ ಸನಾತನ ಪರಂಪರೆ ನಮಗೆ ಪ್ರಕೃತಿಯನ್ನು ಪೂಜಿಸುವುದನ್ನು ಕಲಿಸಿತ್ತು. ಪ್ರಕೃತಿ ಪೂಜಕ ಮುಗ್ಧ ವನವಾಸಿಗಳನ್ನು ವನದ ಮಡಿಲಿನಿಂದ ಒಕ್ಕಲೆಬ್ಬಿಸಿ 'ಅರಣ್ಯವನ್ನು ಮರ ಹಂತಕರ ಕೈಗೆ ಒಪ್ಪಿಸಿ, ಪ್ರಾಮಾಣಿಕ ಅರಣ್ಯ ಅಧಿಕಾರಿಗಳನ್ನು ಬದಿಗೆ ಸರಿಸಿ, ಕಾನೂನಿನ ಮೂಗಿನ ನೇರಕ್ಕೆ ಕಳ್ಳನಾಟ ಸಾಕಾಣಿಕೆದಾರರಿಗೆ ಅನುಕೂಲ ಉಂಟುಮಾಡುವ ಹುನ್ನಾರ ಸ್ಥಾಪಿತ ಹಿತಾಸಕ್ತಿಗಳಿಂದ ನಡೆದಿದೆ' ಎಂಬ ಅನುಮಾನ ಕಾಡುತ್ತಿದೆ.

ರಕ್ಷಿತಾರಣ್ಯಗಳಲ್ಲೇ ಈ ಪರಿಸ್ಥಿತಿ!

ಪಶ್ಚಿಮದ ಶಿಕ್ಷಣ, ಸಂಸ್ಕಾರಗಳಿಗೆ, ಜಾಗತೀಕರಣದ ಧಾವಂತಕ್ಕೆ ಒಪ್ಪಿಸಿಕೊಂಡ ನಾವು ಪಶ್ಚಿಮ ದೇಶಗಳವರಂತೆ ಪ್ರಕೃತಿಯನ್ನು ಭೋಗವಸ್ತುವಾಗಿ ಕಾಣಲಾರಂಭಿಸಿದೆವು.

ಪ್ರಕೃತಿ ಮನುಷ್ಯನ ಆಸೆಗಳನ್ನು ಪೂರೈಸಿತು. ದುರಾಸೆಯನ್ನಲ್ಲ ಎಂಬ ಎಚ್ಚರಿಕೆಯನ್ನು ಮರೆತೆವು. ಪರಿಸರವನ್ನು ಕುಲಗೆಡಿಸಿ ಸರ್ಕಾರಗಳನ್ನು ಬೈಯ್ಯುತ್ತಾ ಕುಳಿತುಬಿಟ್ಟೆವು. ಹೌದು ಪ್ರಕೃತಿ ಮುನಿದಿದೆ ರೌದ್ರ ರೂಪ ತಾಳುತ್ತಿದೆ. ಇನ್ನಾದರೂ ಎಚ್ಚೆತ್ತುಕೊಳ್ಳೋಣ.

*4ನೇ ಪುಟಕ್ಕೆ...*

# ಸಂಸ್ಮರಣೆ — ಖುದಿರಾಮ್ ಬೋಸ್ (3ನೇ ಡಿಸೆಂಬರ್, 1889 – 11ನೇ ಆಗಸ್ಟ್, 1908)

1905ರಲ್ಲಿ ಲಾರ್ಡ್ ಕರ್ಜನ್ ಬಂಗಾಳದ ವಿಭಜನೆ ಮಾಡಿದಾಗ, ಅದರ ವಿರುದ್ಧ ದೇಶದಾದ್ಯಂತ ಚಳುವಳಿಗಳಾದವು. 1908ರ ವೇಳೆಗೆ ಬಂಗಾಳದ ಕ್ರಾಂತಿಕಾರಿ ತರುಣರು ಪ್ರತೀಕಾರದ ಮಾರ್ಗವನ್ನು ಅನುಸರಿಸಿದರು. ಆ ಸಂದರ್ಭದಲ್ಲಿ ನಡೆಯುತ್ತಿದ್ದ ಬ್ರಿಟಿಷರ ದೌರ್ಜನ್ಯವನ್ನು ಹತ್ತಿಕ್ಕಲು ಹೆಣಗಾಡಿ, ಬ್ರಿಟಿಷ್ ಸಾಮ್ರಾಜ್ಯದ ದರ್ಪವನ್ನು ನುಚ್ಚುನೂರು ಮಾಡುವ ಮಹತ್ತರವಾದ ಕೆಲಸದ ಜವಾಬ್ದಾರಿ ಹೊತ್ತಿದ್ದೇ ಹತ್ತೊಂಭತ್ತರ ಹುಡುಗ ಖುದಿರಾಮ್ ಬೋಸ್.

ಭಾರತದ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರಲ್ಲಿ "ಹರೇನ್ ಸರ್ಕಾರ್" ಎನ್ನುವ ಗುಪ್ತನಾಮ ಹೊತ್ತಿದ್ದ ಈ ಯುವಕ್ರಾಂತಿಕಾರಿ ತನ್ನ ಚಿಕ್ಕ ವಯಸ್ಸಿನಲ್ಲಿಯೇ ನೇಣುಗಂಬವೇರಿದ ಪ್ರಥಮ ಬಲಿದಾನಿ. ಅಷ್ಟೇ ಅಲ್ಲದೇ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸೂರ್ಯ ಮುಳುಗದ ಸಾಮ್ರಾಜ್ಯದ ವಿರುದ್ಧ ಮೊದಲ ಬಾರಿಗೆ ಬಾಂಬ್ ಎಸೆದ ಧೀರ.

ಬಂಗಾಳದ ಮೇದಿನಿಪುರ ಜಿಲ್ಲೆಯ ಬಹುವೇನಿ ಎಂಬ ಊರಲ್ಲಿ 3ನೇ ಡಿಸೆಂಬರ್ 1889ರಲ್ಲಿ ಜನಿಸಿದ ಖುದಿರಾಮ್ ಚಿಕ್ಕಂದಿನಲ್ಲಿಯೇ ತಾಯಿ (ಲಕ್ಷ್ಮಿ ಪ್ರಿಯಾದೇವಿ) ಹಾಗೂ ತಂದೆ (ತ್ರೈಲೋಕ್ಯನಾಥ)ಯ ಮೃತ್ಯುವಾದುದರಿಂದ ಅವರ ಅಕ್ಕ ಅನುರೂಪಾದೇವಿ ಹಾಗೂ ಅಕೆಯ ಪತಿ ಅಮೃತಲಾಲನ ಅಕ್ಕರೆಯಲ್ಲಿ ಬೆಳೆದ.

ತನ್ನ ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ತನ್ನ ಅಕ್ಕ ಮತ್ತು ಭಾವನ ಅಕ್ಕರೆಯಲ್ಲಿ ಬೆಳೆದ ಖುದಿರಾಮ್ ಅತಿ ಚಿಕ್ಕ ವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಚಳುವಳಿಯತ್ತ ಆಕರ್ಷಿತರಾಗಿ ಕ್ರಾಂತಿಕಾರಿಗಳೊಂದಿಗೆ ಗುರುತಿಸಿಕೊಳ್ಳಲು ಪ್ರೇರಪಿಸಿದ್ದೇ, ಬಂಕಿಮಚಂದ್ರರ ಆನಂದ ಮಠ ಮತ್ತು ದುರ್ಗೇಶ ನಂದಿನಿ ಕಾದಂಬರಿಗಳು.

ಬಂಕಿಮಚಂದ್ರರ ಆನಂದ ಮಠದ 'ವಂದೇ ಮಾತರಂ'ನ ಮಂತ್ರ ಈತನ ನರನಾಡಿಗಳಲ್ಲಿ ತುಂಬಿ ಹರಿದಾಡುತ್ತಿತ್ತು. ಸುಮಾರು ಹದಿನೈದರ ಹರೆಯದಲ್ಲಿಯೇ ಖುದಿರಾಮ್ ಕ್ರಾಂತಿಕಾರಿ ಸಂಘಟನೆಗಳ ಜೊತೆಗೆ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದನಲ್ಲದೇ ಕ್ರಾಂತಿಕಾರ್ಯದ ಕರಪತ್ರಗಳನ್ನು ಹಂಚಿ ಸಿಕ್ಕಿಬಿದ್ದು ಬಿಡುಗಡೆಯಾಗಿದ್ದ.

ಅರವಿಂದ ಘೋಷರ ಪ್ರಕಾಶನದಲ್ಲಿ ಹೊರಬರುತ್ತಿದ್ದ "ವಂದೇ ಮಾತರಂ" ಪತ್ರಿಕೆ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿತ್ತು. ಈ ಮೊಕದ್ದಮೆಯ ವಿಚಾರಣೆಯನ್ನು ವಿರೋಧಿಸಿ ಪ್ರತಿಭಟನೆ ಮಾಡುತ್ತಿದ್ದ ನಿರಾಯುಧ ಗುಂಪಿನ ಮೇಲೆ ಬ್ರಿಟಿಷರು ಅನಾವಶ್ಯಕವಾಗಿ ಲಾಠಿ ಪ್ರಹಾರ ಮಾಡಿದರು. ಇದರಿಂದ ಕೆರಳಿದ ಹದಿನೈದು ವರ್ಷದ ಸುಶೀಲ್ ಸೇನ್ ಬ್ರಿಟಿಷ್ ಅಧಿಕಾರಿಗೆ ತಿರುಗಿಸಿ ಹೊಡೆದರು. ಇದರಿಂದ ರೊಚ್ಚಿಗೆದ್ದ ಬ್ರಿಟಿಷ್ ಅಧಿಕಾರಿ ಕಿಂಗ್ಸ್ ಫೋರ್ಡ್ ಆ ಯುವಕನನ್ನು ಮ್ಯಾಜಿಸ್ಟ್ರೇಟ್‌ನ ಮುಂದೆ ನಿಲ್ಲಿಸಿ ಆತನ ವಯಸ್ಸನ್ನು ಲೆಕ್ಕಿಸದೆ 15 ಛಡಿ ಏಟಿನ ಶಿಕ್ಷೆ ವಿಧಿಸಿ ವಿಕೃತಿ ಮೆರೆದ.

ಅಪ್ರಾಪ್ತ ಬಾಲಕನ ಮೇಲೆ ಲಾಠಿ ಬೀಸಿದ್ದಲ್ಲದೆ, ಉಗ್ರಶಿಕ್ಷೆಗಳನ್ನು ನೀಡುತ್ತಿದ್ದ ಬ್ರಿಟಿಷರ ದಬ್ಬಾಳಿಕೆಯನ್ನು ಸಹಿಸದ ಕ್ರಾಂತಿಕಾರಿಗಳು ಕಿಂಗ್ಸ್ ಫೋರ್ಡ್‌ನನ್ನು ಮುಗಿಸಲು ತೀರ್ಮಾನಿಸಿದರು. ಇದರ ಸುಳಿವು ಹತ್ತಿದ ಬ್ರಿಟಿಷ್ ಸರ್ಕಾರ ಕಿಂಗ್ಸ್ ಫೋರ್ಡ್‌ನನ್ನು ಮುಜಫರಪುರಕ್ಕೆ ವರ್ಗ ಮಾಡಿತು.

ಕಿಂಗ್ಸ್ ಫೋರ್ಡ್‌ನನ್ನು ಕೊಲ್ಲಲೇಬೇಕೆಂದು ನಿರ್ಧಾರ ಮಾಡಿದ ಯುಗಾಂತರ ಗುಂಪಿನ ನಾಯಕರಾದ ಸತ್ಯೇಂದ್ರನಾಥ ಬೋಸ್, ಖುದಿರಾಮ್ ಬೋಸ್ ಮತ್ತು ಅವರ ಸಹ ಕ್ರಾಂತಿಕಾರಿ ಪ್ರಫುಲ್ ಚಾಕಿಗೆ ವಹಿಸಿದರು. ದಿನಾಂಕ 30ನೇ ಎಪ್ರಿಲ್ 1905ರಂದು ಕಿಂಗ್ಸ್ ಫೋರ್ಡ್‌ನ ವಾಹನದ ಮೇಲೆ ಸ್ಫೋಟಕ ಎಸೆದು ಅವನ ಕ್ರೌರ್ಯವನ್ನು ಅಂತ್ಯಗೊಳಿಸುವ ನಿರ್ಧಾರವನ್ನು ಮಾಡಿದರು. ಪ್ರತೀ ದಿನ ಸಂಜೆ ಕಿಂಗ್ಸ್ ಫೋರ್ಡ್ ಮನೋರಂಜನೆಗಾಗಿ ಹತ್ತಿರದ ಕ್ಲಬ್ಬಿಗೆ ಬರುವ ವಿಷಯವನ್ನು ಅರಿತು ಅವನು ಕ್ಲಬ್ಬಿನಿಂದ ಮನೆಗೆ ಹಿಂದಿರುಗುವ ಸಮಯದಲ್ಲಿ ಆತನ ಕಾರಿನ ಮೇಲೆ ಬಾಂಬ್ ಸಿಡಿಸಿ ಆತನನ್ನು ಹತ್ಯೆ ಮಾಡಲು ನಿರ್ಧರಿಸಿದರು.

1908ನೇ ಎಪ್ರಿಲ್ 30ರಂದು ಪೂರ್ವ ನಿರ್ಧಾರದಂತೆ ಕ್ಲಬ್ಬಿನಿಂದ ಹೊರಬಂದ ಕಿಂಗ್ಸ್ ಫೋರ್ಡ್ ಕಾರಿನಲ್ಲಿ ಯಾರು ಕುಳಿತಿದ್ದಾರೆ ಎಂಬುದನ್ನೂ ಗಮನಿಸದೇ, ನಿಗದಿತ ಸ್ಥಳಕ್ಕೆ ಬಂದ ತಕ್ಷಣವೇ, ಬಾಂಬ್ ಹಾಕಲಾಯಿತು. ಆ ರಾತ್ರಿ ಕಿಂಗ್ಸ್ ಫೋರ್ಡ್‌ನ ವಾಹನ ಬರುತ್ತಿದ್ದಂತೆ ಅಡ್ಡಗಟ್ಟಿ ನಿಂತ ಖುದಿರಾಮ ಅದರತ್ತ ಸ್ಫೋಟಕವನ್ನು ಎಸೆದ. ವಾಹನ ಸ್ಫೋಟಗೊಳ್ಳುತ್ತಿದ್ದಂತೆ ಖುದಿರಾಮ್ ಮತ್ತು ಪ್ರಫುಲ್ಲಚಂದ್ರ ಮುಂದೆ ಪೊಲೀಸ್ ಕೈಯಲ್ಲಿ ಸಿಕ್ಕಿಹಾಕಿಕೊಳ್ಳಬಾರದು ಎಂದು ಯೋಚಿಸಿ, ಇತ್ತ ಕಿಂಗ್ಸ್ ಫೋರ್ಡ್‌ನನ್ನು ಕೊಂದೆವೆಂದುಕೊಂಡು ಒಂದೊಂದು ದಿಕ್ಕಿಗೊಬ್ಬರು ಓಡಿದರು.

ರಾತ್ರಿ ಬೆಳಗಾಗುವುದರಲ್ಲಿ ಕಿಂಗ್ಸ್ ಫೋರ್ಡ್ ಮೇಲಾದ ದಾಳಿಯ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿಕೊಂಡಿತು. ಆದರೆ ಬಾಂಬ್‌ಗೆ ಕಿಂಗ್ಸ್ ಫೋರ್ಡ್ ಸಾಯದೇ ಇಬ್ಬರು ಮಹಿಳೆಯರು ಬಲಿಯಾಗಿದ್ದರು. ಇದರ ಪರಿವೆಯಿಲ್ಲದ ಖುದಿರಾಮ್ ರಾತ್ರಿ ಇಡೀ ಸುಮಾರು 40 ಕಿಲೋಮೀಟರ್ ನಡೆದು ಬೇನಿ ರೈಲು ನಿಲ್ದಾಣವನ್ನು ತಲುಪಿದ.

ಮುಜಾಫರ್ ನಗರದ ಪೊಲೀಸ್ ಸೂಪರಿಂಟೆಂಡೆಂಟ್ ಎಲ್ಲಾ ಕಡೆಗಳಲ್ಲೂ ಅಪರಾಧಿಗಳ ಶೋಧಕಾರ್ಯ ಕೈಗೊಂಡರು. ಆ ಅಪರಾಧಿಗಳನ್ನು ಬಂಧಿಸಲು ಸಹಕರಿಸುವವರಿಗೆ ರೂ. 5000ದ ಬಹುಮಾನವನ್ನೂ ಘೋಷಿಸಲಾಯಿತು. ಮತ್ತೆರಡು ದಿನಗಳ ಒಳಗಾಗಿ, ಪೊಲೀಸರಾದ ಫತೇಸಿಂಗ್ ಮತ್ತು ಶಿಯೋಸಿಂಗ್ ಖುದಿರಾಂನನ್ನು ಮುಜಾಫರ್ ನಗರದಿಂದ 25 ಮೈಲು ದೂರದಲ್ಲಿ ಒಂದು ದಿನಸಿ ಅಂಗಡಿಯ ಸಮೀಪ ಬಂಧಿಸಿದರು. ಅವರಿಂದ ಎರಡು ಪಿಸ್ತೂಲುಗಳನ್ನೂ, ಮದ್ದುಗುಂಡುಗಳನ್ನೂ



ವಶಪಡಿಸಿಕೊಳ್ಳಲಾಯಿತಲ್ಲದೇ ಅವರನ್ನು ಮುಜಾಫರ್ ನಗರಕ್ಕೆ ಕರೆತರಲಾಯಿತು. ಅಲ್ಲಿ ವಿಚಾರಣೆಯಲ್ಲಿ ಖುದಿರಾಮ್ ತಪ್ಪೊಪ್ಪಿಗೆಯ ಹೇಳಿಕೆ ನೀಡಿದ.

ಕ್ರಾಂತಿಕಾರಿಗಳು ಎಸೆದ ಬಾಂಬು ಕಿಂಗ್ಸ್ ಫೋರ್ಡ್‌ನನ್ನು ಕೊಲ್ಲಲಿಲ್ಲವಾದರೂ, ಇಡೀ ಬ್ರಿಟಿಷ್ ಸಾಮ್ರಾಜ್ಯಕ್ಕೇ ನಡುಕ ಹುಟ್ಟಿಸಿತ್ತು. ಈ ಹುಡುಗರು ಎಸೆದ ಬಾಂಬು ಕೇವಲ ಕಿಂಗ್ಸ್ ಫೋರ್ಡ್‌ನ ವಾಹನ ಚೂರು ಚೂರು ಮಾಡಿದ್ದಲ್ಲದೆ, ಬ್ರಿಟಿಷ್ ಸಾಮ್ರಾಜ್ಯದ ಅಹಂಕಾರ ಮತ್ತು ದರ್ಪವನ್ನು ನುಚ್ಚುನೂರು ಮಾಡಿತು. ಮುಜಫರಪುರದಿಂದ ಸುಮಾರು, 25 ಮೈಲುಗಳಾಚೆ ಖುದಿರಾಮ್‌ನನ್ನು ಸೆರೆಹಿಡಿಯಲಾಯಿತಾದರೂ, ತಪ್ಪಿಸಿಕೊಳ್ಳಲು ಅವರು ಮಾಡಿದ ಎಲ್ಲ ಸಾಹಸಗಳು ವ್ಯರ್ಥವಾಗಿ ಬಂಧನವಾಗಿ ಹೋಯಿತು. ವಿಚಾರಣೆ ಎಂಬ ನಾಟಕ ನಡೆದು ಕೊನೆಗೆ ಮರಣದಂಡನೆಯನ್ನು ವಿಧಿಸಲಾಯಿತು.

1908ರ ಜೂನ್ 13ರಂದು ನ್ಯಾಯಾಧೀಶ ಕಾರ್ನ್‌ಡಫ್ ಗಲ್ಲು ಶಿಕ್ಷೆಯ ತೀರ್ಮಾನ ನೀಡಿದ. ಇದನ್ನು ಪ್ರಶ್ನಿಸಿ ಖುದಿರಾಮ್ ಕಲ್ಕತ್ತಾ ಉಚ್ಚನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದರು. ಆದರೆ ಜುಲೈ 13 ರಂದು ತಿರಸ್ಕೃತವಾಗಿ ಕೆಳಗಿನ ನ್ಯಾಯಾಲಯದ ತೀರ್ಮಾನವನ್ನೇ ಎತ್ತಿ ಹಿಡಿಯಲಾಯಿತು. 1908ರ ಆಗಸ್ಟ್ 11ರಂದು ಖುದಿರಾಮ್ ಬೋಸ್‌ಗೆ ಗಲ್ಲುಶಿಕ್ಷೆಯನ್ನು ಜಾರಿಗೊಳಿಸಲಾಯಿತು. ಖುದಿರಾಮ್ ಬೋಸ್ ನಗುನಗುತ್ತಲೇ ನೇಣಿಗೇರಿ ದೇಶಮಾತೆಯ ಪದತಲದಲ್ಲಿ ತನ್ನನ್ನು ಅರ್ಪಿಸಿಕೊಂಡ. ಆ ಬಾಂಬ್ ಸ್ಫೋಟದಲ್ಲಿ ಭಾಗಿಯಾಗಿದ್ದ ಮತ್ತೊಬ್ಬ ಕ್ರಾಂತಿಕಾರಿ ಪ್ರಫುಲ್ ಚಾಕಿ ಪೊಲೀಸರೊಂದಿಗೆ ಹೋರಾಡುತ್ತಿರುವಾಗ ತಪ್ಪಿಸಿಕೊಳ್ಳುವುದು ಅಸಾಧ್ಯ ಎಂದು ಗೊತ್ತಾಗುತ್ತಿದ್ದಂತೆಯೇ ಚಂದ್ರಶೇಖರ ಆಜಾದ್ ಅವರಂತೆಯೇ ತನ್ನ ಪಿಸ್ತೂಲಿನಿಂದಲೇ ತಾನೇ ಗುಂಡಿಕ್ಕಿಕೊಂಡು ಅಮರರಾಗುತ್ತಾರೆ.

ಬ್ರಿಟಿಷ್ ಸಾಮ್ರಾಜ್ಯದ ದರ್ಪವನ್ನು ನುಚ್ಚುನೂರು ಮಾಡಿದ ಈ ಕೆಲಸದ ರೂವಾರಿ ಹತ್ತೊಂಬತ್ತರ ಹುಡುಗ ಖುದಿರಾಮ್ ಬೋಸ್ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ಮೊದಲ ಬಾರಿಗೆ ಬಾಂಬ್ ಬಳಸಿ ಇಡೀ ಬ್ರಿಟೀಷ್ ಸಾಮ್ರಾಜ್ಯದ ನರನಾಡಿಗಳಲ್ಲಿ ಭಯವನ್ನು ಹುಟ್ಟಿಸಿದ್ದ. ಅಲ್ಲಿಯವರೆಗೂ ಉನ್ನತ್ತರಾಗಿದ್ದ ಬ್ರಿಟೀಷ್ ಅಧಿಕಾರಿಗಳಿಗೆ ಭಾರತದ ಕ್ರಾಂತಿಕಾರಿಗಳ ವಿಶ್ವರೂಪದರ್ಶನವಾಯಿತು.

ಈ ಮಹಾನ್ ಕ್ರಾಂತಿಕಾರಿಯನ್ನು ಸೆಂಟ್ರಲ್ ಜೈಲಿನಲ್ಲಿ ಬ್ರಿಟಿಷರು ಇಟ್ಟಿದ್ದಾಗಿನ ಸೆಲ್ ಅನ್ನು ಇಂದು ಮುಜಾಫರ್‌ಪುರದಲ್ಲಿ ಸಂರಕ್ಷಿಸಲಾಗಿದೆ. ಮುಜಫರ್‌ಪುರದ ಕೇಂದ್ರ ಕಾರಾಗೃಹಕ್ಕೆ ಶಹೀದ್ ಖುದಿರಾಮ್ ಬೋಸ್ ಕೇಂದ್ರ ಕಾರಾಗೃಹ ಎಂದು ಹೆಸರಿಡಲಾಗಿದೆ.

## ಎಲ್ರೋ ಕೇಳದ ಕಥೆ

ನೀವು ಗಿಡದ ಯಾವ ಭಾಗವಾಗಲು ಇಷ್ಟಪಡ್ತೀರಾ? ಮತ್ತು ಏಕೆ? – ಮೇಷ್ಟು ಕೇಳಿದ್ರು.

ಒಬ್ಬ ಹುಡುಗ ಎದ್ದು ನಿಂತು –

ಸರ್ ನಾನು ಎಲೆಯಾಗೋಕೆ ಇಷ್ಟಪಡ್ತೀನಿ. ಏಕೆಂದರೆ, ಎಲೆ ದಣಿದು ಬಂದವರಿಗೆ ನೆರಳಾಗುತ್ತೆ, ಎಲ್ಲಾ ಜೀವಿಗಳಿಗೂ ಉಸಿರು ನೀಡುತ್ತೆ, ಹಣ್ಣಾಗಿ ಉದುರಿದರೆ ಕೊಳೆತು ಗೊಬ್ಬರವಾಗುತ್ತೆ ಅಂದ.

**ಮೇಷ್ಟು** – ಶಭಾಷ್, ಕೂತ್ಕೋ.. ಮೂಲೆಯವ್ನು ನೀನು ಹೇಳು ಏನಾಗ್ತಿಯಾ?

**ಮೂಲೆಯ ಹುಡುಗ** – ಸರ್ ನಾನು ಹೂವಾಗ್ತೀನಿ, ಏಕೆಂದರೆ ಹೂವನ್ನು ಎಲ್ಲರೂ ಮೆಚ್ತಾರೆ, ಅದು ಬೀರುವ ಸುಗಂಧವನ್ನು ಎಲ್ಲರೂ ಇಷ್ಟಪಡ್ತಾರೆ. ದೇವರಿಗೂ ಕೂಡಾ ಹೂವಿನಿಂದಲೇ ಅಲಂಕಾರ ಮಾಡ್ತಾರೆ.

**ಮೇಷ್ಟು** – ಗುಡ್. ಲಾಸ್ಟ್ ಬೆಂಚು, ನೀನ್ ಏನಾಗ್ತೀಯೋ?

**ಲಾಸ್ಟ್ ಬೆಂಚು** – ಸರ್ ಹಣ್ಣಾಗಲು ಬಯಸ್ತೀನಿ. ಏಕೆಂದರೆ ಹಣ್ಣು ರುಚಿರುಚಿಯಾಗಿರುತ್ತೆ, ಚಿಕ್ಕಮಕ್ಳು ದೊಡ್ಡವ್ರು ಎಲ್ರೂ ಇಷ್ಟಪಡ್ತಾರೆ, ಹಸಿದವರಿಗೆ ಆಹಾರವಾಗುತ್ತೆ, ಮಾರಿದರೆ ದುಡ್ಡು ಸಿಗುತ್ತೆ. ಕಷ್ಟದಲ್ಲಿ ಸಹಾಯವಾಗುತ್ತೆ.

**ಮೇಷ್ಟು** – ವೆರಿಗುಡ್. ಏಯ್ ಮುಂದಿನವ್ನು, ನೀನ್ ಏನಾಗ್ತೀಯೋ?

**ಹುಡುಗ** – ಸರ್ ರೆಂಬೆಯಾಗೋಕೆ ಇಷ್ಟಪಡ್ತೀನಿ. ಏಕೆಂದರೆ ರೆಂಬೆಗಳಲ್ಲಿ ಪಕ್ಷಿಗಳೆಲ್ಲ ಕೂತು ವಿಶ್ರಾಂತಿ ಪಡ್ಕೊತವೆ. ಗೂಡುಗಳನ್ನು ಕಟ್ಟಿ ಮರಿಗಳನ್ನು ಸಾಕ್ತವೆ. ರೆಂಬೆ ಒಣಗಿ ಬಿದ್ದರೆ ಅದನ್ನೇ ಒಲೆಗೆ ಒಟ್ಟೋದಿಕ್ಕೂ ಬಳಸ್ತೀವಿ.

**ಮೇಷ್ಟು** – ಫೈನ್, ಕೂತ್ಕೋ. ಕೈ ಎತ್ತಿದ್ದೀಯಲ್ಲ, ನೀನ್ ಏನಾಗೋಕೆ ಇಷ್ಟಪಡ್ತೀಯಾ ?

ಕೈ ಎತ್ತಿದವನು ಸಂಕೋಚದಿಂದ ಎದ್ದು ನಿಂತು – ಸರ್ ನಾನು ಬೇರಾಗಲು ಇಷ್ಟಪಡ್ತೀನಿ. ಬೇರು ಭೂಮಿಯೊಳ್ಗಡೆ ಗಟ್ಟಿ ಮಣ್ಣನ್ನು ಸೀಳ್ಕೊಂಡು ಕಷ್ಟದಿಂದ ಬೆಳೆಯುತ್ತೆ. ಬೇರಿಗೆ ಬೆಟ್ಟ-ಗುಡ್ಡ, ಸೂರ್ಯ-ಚಂದ್ರ, ನಕ್ಷತ್ರಗಳು, ಮನುಷ್ಯರು, ಪ್ರಾಣಿಪಕ್ಷಿಗಳು ಹಾಗೂ ಮನೆಗಳು ಒಂದೂ ಕಾಣಿಸಲ್ವಂತೆ. ಆದ್ರೂ ಅದು ಕೊರಗದೆ ತನ್ನ ಪಾಡಿಗೆ ಸತ್ವ ಹೀರಿ ಗಿಡವನ್ನು ಬೆಳೆಸುತ್ತಂತೆ. ನಾನೂ ಕೂಡಾ ಪ್ರಪಂಚ ನೋಡಿಲ್ಲ. ಬೇರೂ ಕೂಡಾ ಪ್ರಪಂಚ ನೋಡಿಲ್ಲ. ಬೇರು ಕತ್ತಲಿನಲ್ಲೇ ಹುಟ್ಟಿ ಕತ್ತಲಿನಲ್ಲೇ ಕಮರಿ ಹೋಗುತ್ತೆ. ಬೇರಿನಂತೆ ನಾನೂ ಕೂಡಾ ಅಡೆತಡೆಗಳನ್ನು ಎದುರಿಸಿ ಬೆಳೀಬೇಕು. ದುಃಖವಾದಾಗಲೆಲ್ಲ ಬೇರನ್ನು ನೆನೆದು ಸಮಾಧಾನ ಮಾಡ್ಕೊತಿನಿ.

ಮೇಷ್ಟು ಅತ್ಯಾನಂದದಿಂದ ಆ ಅಂಧ ಹುಡುಗನ ಕೆನ್ನೆಗಳನ್ನು ಚಿವುಟಿ ಮುದ್ದಿಸಿ ಭಾವುಕರಾದರು.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ




ಶಿವಮೊಗ್ಗದಲ್ಲಿರುವ ರಾಷ್ಟ್ರಕವಿ ಕುವೆಂಪು ಅವರ ಮನೆ ಕವಿ ಶೈಲದಲ್ಲಿ ↑ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ನಿಮಿತ್ತ 'ಕವಿ ಶೈಲದಲ್ಲಿ ಕವಿ ಸಮ್ಮಿಲನ' ಎಂಬ ಕಾರ್ಯಕ್ರಮವನ್ನು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಮತ್ತು ವಿಕಾಸ ಟ್ರಸ್ಟ್‌ನ ಅಡಿಯಲ್ಲಿ ಆಯೋಜಿಸಲಾಗಿತ್ತು.



ರಾಷ್ಟ್ರೀಯ ಸ್ವಯಂಸೇವಕ ಸಂಘದ ↑ ತುಮಕೂರಿನ ಕಾರ್ಯಾಲಯ 'ಸಾಧನಾ'ದಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ನಡೆಯುತ್ತಿರುವ 'ಹರ್ ಘರ್ ತಿರಂಗಾ' ಅಭಿಯಾನದ ಸಲುವಾಗಿ ಹಾರಾಡಿದ ತ್ರಿವರ್ಣ ಧ್ವಜ.




ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ↑ ಡಾ. ಮೋಹನ್ ಭಾಗವತ್ ಅವರು ನಾಗಪುರದಲ್ಲಿ ಆಯೋಜನೆಗೊಂಡ ಕಾರ್ಯಕ್ರಮದಲ್ಲಿ 'ಅಖಿಲ ಭಾರತೀಯ ಮಹಿಳಾ ಚರಿತ್ರ ಕೋಶ – ಪ್ರಥಮ ಖಂಡ'ದ ಲೋಕಾರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಪ್ರಮುಖ ಸಂಚಾಲಿಕಾ ಶಾಂತಕ್ಕನವರು ಉಪಸ್ಥಿತರಿದ್ದರು.

## ಸಾಲುದ್ದದ ಸುದ್ದಿಗಳು



ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೇಂದ್ರ ಕಛೇರಿ ನಾಗಪುರದ ರೇಷಿಮ್‌ಭಾಗ್‌ನಲ್ಲಿ ರಾಷ್ಟ್ರಧ್ವಜವನ್ನು ಸರಸಂಘಚಾಲಕರಾದ ಶ್ರೀ ಮೋಹನ್ ಭಾಗವತ್ ಅವರು ಆರೋಹಣ ಮಾಡಿದರು. ←



ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ನಡೆಯುತ್ತಿರುವ 'ಹರ್ ಘರ್ ತಿರಂಗಾ' ಅಭಿಯಾನದಡಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಪ್ರಾಂತದ ಬೆಂಗಳೂರಿನ ಕಾರ್ಯಾಲಯ ಕೇಶವ ಕೃಪಾದಲ್ಲಿ ತಿರಂಗಾ ಧ್ವಜವನ್ನು ಹಾರಿಸಲಾಯಿತು.

ಮನೆಮನೆಯಲ್ಲಿಯೂ ತಿರಂಗಾ ಅಭಿಯಾನದ ಸಲುವಾಗಿ ಹಾರಾಡಿದ ತ್ರಿವರ್ಣ ಧ್ವಜಗಳು. ದೇಶದ ನಾಗರೀಕರು ತಮ್ಮ ತಮ್ಮ ಮನೆಗಳ ಮೇಲೆ ಧ್ವಜವನ್ನು ಹಾರಿಸುವುದರ ಮೂಲಕ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದಲ್ಲಿ ಪಾಲ್ಗೊಂಡರು.













पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th AUGUST 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-09-2022



## ಜಮ್ಮು-ಕಾಶ್ಮೀರದಲ್ಲಿ ಕಳೆದ 2 ವರ್ಷದಲ್ಲಿ ಶಾಲಾ ದಾಖಲಾತಿಯಲ್ಲಿ 14.5% ಹೆಚ್ಚಳ

ಜಮ್ಮು ಮತ್ತು ಕಾಶ್ಮೀರದ ಸರ್ಕಾರಿ ಶಾಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ 14.5 ಪ್ರತಿಶತದಷ್ಟು ಹೆಚ್ಚಾಗಿದೆ ಎಂದು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಹೇಳಿದ್ದಾರೆ.



2019ರ ಮೊದಲು ದಾಖಲಾತಿಯು ಸ್ಥಿರವಾಗಿ ಕುಸಿಯುತ್ತಿತ್ತು. ಆದರೆ ಕಳೆದ ಕೆಲವು ವರ್ಷಗಳಲ್ಲಿ ಇದು ಗಮನಾರ್ಹವಾಗಿ ಹೆಚ್ಚಾಗಿದೆ ಎಂದಿದ್ದಾರೆ. 2019ರ ಹಿಂದಿನ ಮೂರು ವರ್ಷಗಳಲ್ಲಿ, ಸರ್ಕಾರಿ ಶಾಲೆಗಳ ದಾಖಲಾತಿಯಲ್ಲಿ ನಿರಂತರ ಇಳಿಕೆ ಕಂಡುಬಂದಿದೆ. ಆದರೆ, ಕಳೆದ ಎರಡು ವರ್ಷಗಳಲ್ಲಿ ದಾಖಲಾತಿಯು ಶೇಕಡಾ 14.5 ರಷ್ಟು ಹೆಚ್ಚಾಗಿದೆ ಎಂದು ಸಿನ್ಹಾ ದೇವಕಿ ಆರ್ಯ ಪುತ್ರಿ ಪಾಠಶಾಲೆಯಲ್ಲಿ ವಾರ್ಷಿಕ ದಿನಾಚರಣೆಯಲ್ಲಿ ಭಾಗಿಯಾಗಿದ್ದ ಸಂದರ್ಭದಲ್ಲಿ ಹೇಳಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ (NEP) 2020ರ ಶಿಫಾರಸ್ಸಿನಂತೆ ಬಾಲ್ಯದ ಆರೈಕೆ ಮತ್ತು ಶಿಕ್ಷಣಕ್ಕಾಗಿ ಕಣಿವೆಯಲ್ಲಿ ನಿರಂತರ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಗವರ್ನರ್ ಸಿನ್ಹಾ ಹೇಳಿದ್ದಾರೆ.

ಅನುದಾನ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಕೇಂದ್ರ ಸರ್ಕಾರ ನೀಡಿದ ಆದ್ಯತೆಯಿಂದಾಗಿ ಪರಿಸ್ಥಿತಿ ಸುಧಾರಿಸಿದೆ. ಶಾಲೆಯಿಂದ ವಿಮುಖವಾಗುವ ಮಕ್ಕಳನ್ನು ಮತ್ತೆ ಕರೆತರಲು ಬನ್ನಿ ಶಾಲೆಗೆ ಹೋಗೋಣ ಅಭಿಯಾನ ದೊಡ್ಡ ಮಟ್ಟದ ಯಶಸ್ಸು ಕಂಡಿದೆ. ಇದರಡಿ 1 ವರ್ಷದಲ್ಲಿ 1.65 ಲಕ್ಷ ಮಕ್ಕಳನ್ನು ಶಾಲೆಗೆ ದಾಖಲಿಸಲಾಗಿದೆ. ಇದಲ್ಲದೇ ತಲಾಶ್ ಆ್ಯಪ್ ಮೂಲಕವೂ ಮಕ್ಕಳನ್ನು ಗುರುತಿಸಿ ಶಾಲೆಗೆ ಸೇರಿಸಿಕೊಳ್ಳಲಾಗುತ್ತಿದೆ. ಆ್ಯಪ್ ಮೂಲಕ ಇಲ್ಲಿಯವರೆಗೆ 86 ಸಾವಿರ ಮಕ್ಕಳನ್ನು ಗುರುತಿಸಿ, ಅವರನ್ನು ಶಾಲೆಗೆ ದಾಖಲಿಸಿಕೊಳ್ಳಲಾಗಿದೆ. ಹಲವು ಆಕ್ಷೇಪಗಳ ನಡುವೆಯೂ 1.24 ಲಕ್ಷ ಮಕ್ಕಳು ಶಿಶುಪಾಲನಾ ಶಿಕ್ಷಣ ಕೇಂದ್ರಕ್ಕೆ ದಾಖಲಾಗಿದೆ. ಈ ವರ್ಷ 2 ಸಾವಿರ ಶಿಶುವಿಹಾರಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ವರ್ಷ ಸರ್ಕಾರದಿಂದಲೇ ಇಲ್ಲಿನ 14 ಸಾವಿರ ಯುವತಿಯರಿಗೆ ನೀಟ್ ತರಬೇತಿ ನೀಡಲು ನಿರ್ಧರಿಸಲಾಗಿದೆ. ಅದರ ವೆಚ್ಚವನ್ನು ಆಡಳಿತವೇ ಭರಿಸಲಿದೆ ಎಂದು ಸಿನ್ಹಾ ಮಾಹಿತಿ ನೀಡಿದ್ದಾರೆ.

## ಅಫ್ಘಾನಿಸ್ತಾನಕ್ಕೆ 10ನೇ ಬ್ಯಾಚ್ ವೈದ್ಯಕೀಯ ನೆರವು ಪೂರೈಸಿದ ಭಾರತ

**ನವದೆಹಲಿ:** ಭಾರತವು ತನ್ನ ಮಾನವೀಯ ನೆರವಿನ ಭಾಗವಾಗಿ ಅಫ್ಘಾನಿಸ್ತಾನಕ್ಕೆ ಹೊಸ ವೈದ್ಯಕೀಯ ಸಾಮಗ್ರಿಗಳನ್ನು ಶನಿವಾರ ಪೂರೈಸಿದೆ. ವೈದ್ಯಕೀಯ ನೆರವಿನ ಸರಕನ್ನು ಕಾಬೂಲ್‌ನ ಇಂದಿರಾಗಾಂಧಿ ಆಸ್ಪತ್ರೆಗೆ ಹಸ್ತಾಂತರಿಸಲಾಯಿತು. "ಮಾನವೀಯ ನೆರವಿನ ಭಾಗವಾಗಿ ಭಾರತವು ಅಫ್ಘಾನಿಸ್ತಾನಕ್ಕೆ 10ನೇ ಬ್ಯಾಚ್ ವೈದ್ಯಕೀಯ ಸಹಾಯವನ್ನು ಪೂರೈಸಿದೆ" ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಅಫ್ಘಾನ್ ಜನರಿಗೆ ಸಹಾಯ ಮಾಡಲು ವಿಶ್ವಸಂಸ್ಥೆಯು ಮಾಡಿದ ತುರ್ತು ಮನವಿಗಳ ದೃಷ್ಟಿಯಿಂದ, ಭಾರತವು ಇದುವರೆಗೆ 10 ಬ್ಯಾಚ್‌ಗಳಲ್ಲಿ 32 ಟನ್ ವೈದ್ಯಕೀಯ ನೆರವು ನೀಡಿದೆ. ಪೂರೈಕೆಗಳಲ್ಲಿ ಅಗತ್ಯ ಜೀವ ಉಳಿಸುವ ಔಷಧಿಗಳು, ಟಿಬಿ ವಿರೋಧಿ ಔಷಧಿಗಳು, 500,000 ಡೋಸ್‌ಗಳ COVID-19 ಲಸಿಕೆಗಳು ಇತ್ಯಾದಿ ಸೇರಿವೆ. "ಈ ವೈದ್ಯಕೀಯ ರವಾನೆಗಳನ್ನು ವಿಶ್ವ ಆರೋಗ್ಯ ಸಂಸ್ಥೆ (WHO) ಮತ್ತು ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ, ಕಾಬೂಲ್‌ಗೆ ಹಸ್ತಾಂತರಿಸಲಾಗಿದೆ" ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

ಆ ದೇಶದಲ್ಲಿ ತೆರೆದುಕೊಳ್ಳುತ್ತಿರುವ ಮಾನವೀಯ ಬಿಕ್ಕಟ್ಟನ್ನು ಪರಿಹರಿಸಲು ಅಫ್ಘಾನಿಸ್ತಾನಕ್ಕೆ ಅಡೆತಡೆಯಿಲ್ಲದ ಮಾನವೀಯ ನೆರವು ನೀಡುವ ಕಾರ್ಯವನ್ನು ಭಾರತ ನಿರಂತರವಾಗಿ ಮಾಡುತ್ತಿದೆ.



## ಟೆಕ್ಸಾಸ್‌ನಲ್ಲಿ 1,500ಕ್ಕೂ ಹೆಚ್ಚು ವಿದ್ಯಾರ್ಥಿಗಳ ಭಗವದ್ಗೀತೆ ಪಠಣ

ವಿದೇಶಿ ನೆಲದಲ್ಲಿ ಹಿಂದೂ ಸಂಸ್ಕೃತಿಯ ಬೇರುಗಳನ್ನು ಪೋಷಿಸುವ ಕಾರ್ಯಗಳು ನಿರಂತರವಾಗಿ ನಡೆದುಕೊಂಡು ಬರುತ್ತಿವೆ. ಟೆಕ್ಸಾಸ್‌ನಲ್ಲಿ 1,500ಕ್ಕೂ ಹೆಚ್ಚು ವಿದ್ಯಾರ್ಥಿಗಳು 'ಗೀತಾ ಸಹಸ್ರಗಲಾ' ಕಾರ್ಯಕ್ರಮದಲ್ಲಿ 700 ಭಗವದ್ಗೀತೆ ಶ್ಲೋಕಗಳನ್ನು ಪಠಿಸಿದರು. ಆಗಸ್ಟ್ 13ರಂದು ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿ ಅವಧೂತ ದತ್ತ ಪೀಠಂ ಇದನ್ನು ಆಯೋಜಿಸಿದ್ದು, ವಿದ್ಯಾರ್ಥಿಗಳು ಇತಿಹಾಸ ರಚಿಸಿದ್ದಾರೆ. ಅಲೆನ್ ಈವೆಂಟ್ ಸೆಂಟರ್‌ನಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಸ್ಥಾನ ಪಡೆದುಕೊಂಡಿದೆ. ಇದನ್ನು ಐತಿಹಾಸಿಕ ಕ್ಷಣವೆಂದು ಪರಿಗಣಿಸಲಾಗಿದೆ. ಸುಮಾರು ಒಂದು ವರ್ಷದಿಂದ ಈ ದಾಖಲೆಗಾಗಿ ಅಭ್ಯಾಸ ನಡೆಸಲಾಗಿತ್ತು. ಸಾಮೂಹಿಕ ಪಠಣದ ನಂತರ, ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್‌ನ ಪ್ರತಿನಿಧಿಯೊಬ್ಬರು ಸ್ವಾಮೀಜಿಯವರಿಗೆ "ಅತಿದೊಡ್ಡ ಏಕಕಾಲಿಕ ಹಿಂದೂ ಪಠ್ಯ ಪಠಣ"ಕ್ಕಾಗಿ ವಿಶ್ವ ದಾಖಲೆಯನ್ನು ಪ್ರದಾನಿಸಿದರು. ಅಲ್ಲದೆ, ಕಾರ್ಯಕ್ರಮದ ನಂತರ, ಫ್ರಿಸ್ಕೊ ನಗರದ ಮೇಯರ್ ಆಗಸ್ಟ್ 13 ಅನ್ನು "ಗೀತಾ ಸಹಸ್ರಗಲ ದಿನ" ಎಂದು ಘೋಷಿಸಿದರು.

ಸ್ವಾಮೀಜಿಯವರು ಫ್ರಿಸ್ಕೊದಲ್ಲಿರುವ ಕಾರ್ಯ ಸಿದ್ಧಿ ಹನುಮಾನ್ ದೇವಾಲಯದ (KSHT) ಸ್ಥಾಪಕರು ಮತ್ತು ಅವರು "ಗೀತಾ ಮಹಾಯಜ್ಞ" ಕಾರ್ಯಕ್ರಮವನ್ನು ಸ್ಥಾಪಿಸಿದವರು. ಸಂಸ್ಕೃತ ಪಠಣ ಮತ್ತು ಕಂಠಪಾಠವನ್ನು ಕಲಿಸುವುದು ಇದರ ಗುರಿಯಾಗಿದೆ.



1ನೇ ಪುಟದಿಂದ...

## ಅಮೃತ ದೇವಿ ಸ್ಮರಣೆಯಲ್ಲಿ...

ಮರದಂತೆ ನರನಿಲ್ಲ! ಪರರ ಉಪಕಾರಕ್ಕಾಗಿಯೇ ದೃಢವಾಗಿ ನಿಂತ ಮರದಂತೆ ನರನೇಕೆ ನಿಲ್ಲುತ್ತಿಲ್ಲ? ದಣಿವಾದಾಗ ಜನ-ದನಗಳ ಆದಿಯಾಗಿ-ಸಾವರಿಸಿಕೊಳ್ಳಲು, ಆಶ್ರಯಿಸುವ ಮರ ತನ್ನ ಮಡಿಲಲ್ಲಿ ಆಶ್ರಯವಿತ್ತು, ಹಣ್ಣನಿತ್ತು, ಚಾಮರ ಬೀಸಿ ಸಂತೈಸಿದೆ. ಪ್ರತಿಯಾಗಿ ನಾವು ಕೊಟ್ಟಿದ್ದು, ಕಲ್ಲೇಟು-ಕೊಡಲಿಯೇಟು.

ಸಮೃದ್ಧ ಕಾಡುಗಳನ್ನು ಸವರಿ, ಅಕೇಶಿಯ ನೆಡುತೋಪುಗಳ ಅಕೃತ್ಯಕ್ಕೆಳಸುವ ಸರಕಾರ ಒಂದೆಡೆ. ಸಮೃದ್ಧ ಮರಗಳನ್ನು ಕತ್ತರಿಸಿ ಲೇಔಟ್‌ಗಳ ನಿರ್ಮಾಣ ಮಾಡಿ ನಗರೀಕರಣದ ಹುಚ್ಚು ಹಿಡಿದಿರುವ ಮನುಷ್ಯ ಇನ್ನೊಂದೆಡೆ! ಜನತೆ ಮಾತ್ರ ಇದು ಹುಚ್ಚೋ, ಬೆಪ್ಪೋ, ಶಿವಲೀಲೆಯೋ ಎಂದು ಕಣ್ ಕಣ್ ಬಿಡುತ್ತಿದೆ. ಪಶ್ಚಿಮ ದೇಶಗಳಂತೆ ಜಾಗತೀಕರಣದ ಸ್ಪರ್ಧೆಯಲ್ಲಿ ಆಧುನೀಕರಣಕ್ಕೆ ತಲೆಬಾಗಿ ಸಮ್ಮತಿಮುದ್ರೆ ಒತ್ತಿದ ನಾಯಕರುಗಳು ಸೂಟು-ಬೂಟುಗಳೊಂದಿಗೆ ಕಂಗೊಳಿಸುತ್ತ, ಮೇಜವಾನಿ ಕೂಟಗಳಲ್ಲಿ ಭಾಗವಹಿಸಿ ಮುಖ, ತುಟಿಗಳಿಗೆ ಒತ್ತಿಕೊಳ್ಳಲು ಬೇಕು tissue paper ಕರವಸ್ತ್ರದ ಬದಲಿಗೆ!

ಮೊದಮೊದಲು ಒಣಗಿ ಸತ್ತು ಬಿದ್ದ ಮರಗಳನ್ನು ಕತ್ತರಿಸಿ ಈ ಟಿಶ್ಯೂ ಪೇಪರ್‌ಗಳನ್ನು ತಯಾರಿಸಲಾಗುತ್ತಿತ್ತು. ಬಳಿಕ, ಬೇಡಿಕೆ ಹೆಚ್ಚಿದಂತೆ ಹಸಿ ಮರಗಳನ್ನು ಕತ್ತರಿಸುವುದು ಆರಂಭವಾಯಿತು. ನಮ್ಮ ದೇಶದಲ್ಲಿ ದಿನವೊಂದಕ್ಕೆ 2700 ಮರಗಳ ಸಂಹರಿಸಲಾಗುತ್ತಿದೆ. ವ್ಯಾಪಕ ಅರಣ್ಯನಾಶದಿಂದ ಜೀವವೈವಿಧ್ಯಗಳ ನಾಶ, ಭೂಮಿಯ ಮೇಲ್ಮಣ್ಣಿನ ಸವಕಳಿ, ನೀರನ್ನು ಹಿಡಿದಿಡುವ ಸಹಜ ವ್ಯವಸ್ಥೆ ನಷ್ಟ, ಪರಿಣಾಮ ತಾಪಮಾನ ಹೆಚ್ಚಳಕೆ ಕಾರಣವಾಗಿದೆ.

- ಮರವೊಂದು ತನ್ನ ಜೀವಿತಾವಧಿಯಲ್ಲಿ 5.3 ಲಕ್ಷ ರೂಪಾಯಿಗಳ ಆಮ್ಲಜನಕ ಪುಗಸಟ್ಟೆ ಆಗಿ ನೀಡುತ್ತಿದೆ.
- 6.4 ಲಕ್ಷ ರೂ.ಗಳಷ್ಟು ವಾಯು ಮಾಲಿನ್ಯವನ್ನು ತಡೆಯುತ್ತದೆ.
- 5.3 ಲಕ್ಷ ರೂ. ಮೌಲ್ಯದಷ್ಟು ಪಕ್ಷಿ ಮತ್ತು ಪ್ರಾಣಿಗಳಿಗೆ ಆಶ್ರಯ ನೀಡುತ್ತದಲ್ಲದೆ, ಹಣ್ಣು ಹೂವುಗಳನ್ನು ನೀಡುತ್ತಿದೆ.
- ಒಟ್ಟಾರೆಯಾಗಿ ಮರ ಒಂದರಿಂದ ನಮಗಾಗುವ ಲಾಭ 33 ಲಕ್ಷ ರೂಪಾಯಿಗಳಿಗೂ ಅಧಿಕ!
- ಮರಗಳ ಸಂಹಾರದಿಂದ ಉಸಿರಾಟವೇ ದುಬಾರಿಯಾದೀತು.
- ವ್ಯಕ್ತಿಯ ಉಸಿರಾಟಕ್ಕೆ ದಿನವೊಂದಕ್ಕೆ ಮೂರು ಆಕ್ಸಿಜನ್ ಸಿಲಿಂಡರ್‌ಗಳು ಬೇಕು.
- 700 ರೂ.ಗಳಂತೆ ತಲಾ 3 ಆಕ್ಸಿಜನ್ ಸಿಲಿಂಡರ್ ಬೆಲೆ 2,100 ರೂಪಾಯಿಗಳು.
- ಅರಣ್ಯ ನಾಶದ ಭೀಕರತೆ ಇದೇ ರೀತಿ ಮುಂದುವರಿದಲ್ಲಿ ವ್ಯಕ್ತಿಗೆ ವರ್ಷಕ್ಕೆ 7,66,500 ರೂಪಾಯಿಗಳಷ್ಟು ಆಕ್ಸಿಜನ್ ಬೇಕು.
- ಒಟ್ಟಿನಲ್ಲಿ ಮರಗಳ ಸಂಹಾರದಿಂದ ಉಸಿರಾಟವೇ ತುಟ್ಟಿ ಆದೀತು.

ಹಾಗಾಗಿ ಗಿಡ ನೆಡುವ 'ಪೋಷಿಸುವ ವೃಕ್ಷ ಸಂರಕ್ಷಣೆ'ಯ ಅನಿವಾರ್ಯ ಕೈಂಕರ್ಯದಲ್ಲಿ ತೊಡಗೋಣ. ಬಿಷ್ಣೋಯಿ ಅದ್ಭುತ ಬಲಿದಾನ ಪ್ರಕೃತಿಯ ಸಂರಕ್ಷಣೆಗಾಗಿ. ಆಕೆಯ ನೆನಪಿಗೆ ನಮ್ಮೆಲ್ಲರ ಭವಿಷ್ಯದ ಬದುಕಿಗೆ ಪ್ರಕೃತಿಯ ಉಳಿಸುವುದಕ್ಕೋಸ್ಕರ ಜಾಗೃತಿಯ ಸಂದೇಶದ "ಪ್ರಕೃತಿ ವಂದನ" ಕಳೆದ ಮೂರು ವರ್ಷಗಳಿಂದ ದೇಶವ್ಯಾಪಿ ನಡೆಸಲಾಗುತ್ತಿದೆ. ಈ ವರ್ಷವೂ 28 ಆಗಸ್ಟ್ 2022ರ ಆದಿತ್ಯವಾರ ಹಮ್ಮಿಕೊಳ್ಳಲಾಗಿದೆ. ಪರ್ಯಾವರಣ ಸಂರಕ್ಷಣಾ ಗತಿ ವಿಧಿ, ಎಚ್ಎಸ್ಎಸ್ ಫೌಂಡೇಶನ್, ಸಮರ್ಥ ಭಾರತ ಇತ್ಯಾದಿ ಸಂಸ್ಥೆಗಳು ಬೇರೆ ಬೇರೆ ಮಾಧ್ಯಮಗಳ ಮೂಲಕ "ಪ್ರಕೃತಿ ವಂದನ" ಆಯೋಜಿಸಿದೆ. ತಮ್ಮ ತಮ್ಮ ಪರಿಸರದ ನಾಲ್ಕಾರು ಕುಟುಂಬಗಳು ಒಟ್ಟು ಸೇರಿ/ಅಥವಾ ವ್ಯಕ್ತಿಗತವಾಗಿ ತಮ್ಮದೇ ಮನೆಯಲ್ಲಿ/ ಯಾವುದೇ ಒಂದು ವೃಕ್ಷವನ್ನು ಪೂಜಿಸಿ ಕೃತಜ್ಞತೆ ಸಲ್ಲಿಸುವ ಪ್ರಕೃತಿ ವಂದನ ನಡೆಸುವಂತೆ ಕರೆ ನೀಡಿದೆ. ಸಾಮಾಜಿಕ ಜಾಲತಾಣದಲ್ಲೂ ನೇರಪ್ರಸಾರವಿದೆ. ಪರ್ಯಾವರಣ ಸಂರಕ್ಷಣೆಯ ಅರ್ಥಾತ್ ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ಪ್ರಕೃತಿ ಸಂರಕ್ಷಣಾ ಆಶಯವಿದೆ. ಬನ್ನಿ, ಎಲ್ಲರೂ ಕೈ ಜೋಡಿಸೋಣ.

– **ಜಯರಾಮ ಬೊಳ್ಳಾಜೆ,** ಪರ್ಯಾವರಣ ಸಂರಕ್ಷಣೆ ಕರ್ನಾಟಕ ಸಂಯೋಜಕ, ಬೆಂಗಳೂರು

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.